ಮಧ್ಯರಾತ್ರಿಯಲ್ಲಿ ಭಯಂಕರವಾಗಿ ಏನೋ ಸಿಡಿದ ಸದ್ದಾಯಿತು. ಎಚ್ಚರವಾಯ್ತು. ಆಗ ಗಂಟೆಯೆಷ್ಟೋ ನೆನಪಿಲ್ಲ. ನೆನಪಿರುವುದು ಆ ಭಯಂಕರ ಸದ್ದು ಮಾತ್ರ. ಆ ಸದ್ದಿಗೆ ಎದೆ ನಡುಗಿತು, ಕಿಟಕಿಗಳು, ಹಾಸಿಗೆ ಎಲ್ಲವೂ ಅಲ್ಲಾಡಿ ಹೋದವು. ಕಿಟಕಿಯಿಂದ ಹೊರಗಿಣುಕಿದೆ. ದೊಡ್ಡ ಅರ್ಧವೃತ್ತಾಕಾರದ ಬೆಂಕಿಯುಂಡೆ ಉರಿಯುತ್ತಿತ್ತು. ಸಿನಿಮಾಗಳಲ್ಲಿ ತೋರಿಸ್ತಾರಲ್ಲ ಹಾಗೆ. ಆದರೆ ಫಿಲ್ಮ್‌ನವರು ಕೂಡ ನಾನಾವತ್ತು ನೋಡಿದಷ್ಟು ದಟ್ಟವಾದ ಕೆಂಪು ನೇರಳೆ ಬಣ್ಣದ ಜ್ವಾಲೆಗಳನ್ನು ತೋರಿಸುವುದಿಲ್ಲ. ಅದು ಪೂರ್ತಿ ಉರಿದು ಮುಗಿಯುವವರೆಗೂ ನೋಡುತ್ತಲೇ ಇದ್ದೆ. ಆಮೇಲೆ ಮಲಗಲು ಹೋದೆ. 'ದೇವರೆ! ಸದ್ಯ ಆ ಕ್ಷಿಪಣಿ ನನ್ನ ಮನೆ ಮೇಲೆ ಬೀಳಲಿಲ್ಲ. ನನ್ನ ಕುಟುಂಬವನ್ನು ಕೊಲ್ಲಲಿಲ್ಲ. ನಿಂಗೆ ಕೋಟಿ ನಮಸ್ಕಾರಗಳು' ಅಂತ ದೇವರಿಗೆ ಮನಸ್ಸಿನಲ್ಲಿ ಪ್ರಾರ್ಥಿಸಿದೆ. ಈಗ್ಗೆ ಮೂವತ್ತು ವರ್ಷಗಳು ಕಳೆದಿವೆ. ಆದರೂ ಆವತ್ತು ದೇವರಿಗೆ ಹಾಗೆ ಪ್ರಾರ್ಥಿಸಿದ ಬಗ್ಗೆ ಈವತ್ತಿಗೂ ಅಪರಾಧಿ ಭಾವನೆ ಕಾಡುತ್ತದೆ. ಆ ಕ್ಷಿಪಣಿ ನನ್ನ ತಮ್ಮನ ಗೆಳೆಯನ ಮನೆ ಮೇಲೆ ಬಿದ್ದು ಅವನು ಮತ್ತು ಅವನ ತಂದೆ ಸತ್ತುಹೋದರು. ಅವನ ತಾಯಿ ಮತ್ತು ಅವನ ತಂಗಿ ಉಳಿದಿದ್ದಾರೆ ಎನ್ನುವ ವಿಷಯ ಮಾರನೆಯ ದಿನ ತಿಳಿಯಿತು. ಇದಾದ ಒಂದು ವಾರದ ಬಳಿಕ ಆ ತಾಯಿ ನನ್ನ ತಮ್ಮನ ತರಗತಿಗೆ ಹೋಗಿ ಅಲ್ಲಿದ್ದ ಏಳು ವರ್ಷದ ಮಕ್ಕಳ ಹತ್ತಿರ ತನ್ನ ಮಗನ ಫೋಟೊ ಏನಾದರೂ ಅವರ ಬಳಿ ಇದ್ದರೆ ಕೊಡಿ ಎಂದು ಅಂಗಲಾಚಿದಳಂತೆ. ಆ ರಾತ್ರಿ ಆಕೆ ತನ್ನ ಸಮಸ್ತವನ್ನು ಕಳೆದುಕೊಂಡು ಬಿಟ್ಟಿದ್ದಳು.

ಇದು ದಿನಪತ್ರಿಕೆ, ಟೀವಿಗಳಲ್ಲಿ ನೀವು ನೋಡಿರುವ ಹರಿದ ಬಟ್ಟೆ, ಕೊಳಕು ಮುಖ, ಹೆದರಿದ ಕಂಗಳ ಯಾರೋ ಅನಾಮಧೇಯ ವ್ಯಕ್ತಿಯ ಕತೆಯಲ್ಲ. ಯುದ್ಧ ಸಂತ್ರಸ್ತ ನಿರಾಶ್ರಿತರ ಕತೆಯಲ್ಲ. ಇದು ಯಾವುದೋ ಯುದ್ಧದ ಸಮಯದಲ್ಲಿ ಬದುಕಿಹೋದವರ ಕತೆಯಲ್ಲ. ಅವರ ಕುಲಗೋತ್ರ, ಕನಸು, ಕುಟುಂಬ, ನಂಬಿಕೆ, ಮೌಲ್ಯಗಳು ಯಾವುದೂ ತಿಳಿಯದ ಅನಾಮಧೇಯರ ಕತೆಯಲ್ಲ. ಇದು ನನ್ನ ಕತೆ. ನಾನೇ ಆ ಹುಡುಗಿ. ನಾನೇ ಆ ಯುದ್ಧದಲ್ಲಿ ಬದುಕುಳಿದ ನಿರಾಶ್ರಿತೆ. ನಾನು ಬೆಳೆದದ್ದು ಯುದ್ಧದಲ್ಲಿ ಚೂರಾದ ಇರಾಕಿನಲ್ಲಿ. ಯುದ್ಧಕ್ಕೆ ಎರಡು ಮುಖಗಳು. ನಾವು ಒಂದರ ಬಗ್ಗೆ ಮಾತ್ರ ಮಾತಾಡುತ್ತೇವೆ. ಯುದ್ಧದ ಇನ್ನೊಂದು ಕರಾಳ ಮುಖವನ್ನು ನೋಡುತ್ತಲೇ ನಾನು ಬೆಳೆದೆ. ಈಗ ಅದರ ಬಗ್ಗೆಯೇ ಕೆಲಸ ಮಾಡುತ್ತಿದ್ದೇನೆ.

ನಾನು ಬೆಳೆದದ್ದೇ ಯುದ್ಧದ ಕೆಂಪುಬಣ್ಣದ ನಡುವೆ. ಕೆಂಪುಬೆಂಕಿ ಮತ್ತು ಕೆಂಪುರಕ್ತ, ಕ್ಷಿಪಣಿಗಳು ಸಿಡಿಯುತ್ತಿದ್ದಂತೆ ಮುಖಕ್ಕೆ ರಾಚುತ್ತಿದ್ದ ಕಂದುಬಣ್ಣದ ಮಣ್ಣಿನ ದೂಳು, ಕ್ಷಿಪಣಿಯಿಂದ ಹಾರುವ ಕಬ್ಬಿಣದ ಚೂರುಗಳು ಕಣ್ಣಿಗೆ ಅಪಾಯಕಾರಿ. ನಾನು ಬೆಳೆದದ್ದೇ ಬಾಂಬುಗಳ ಸಿಡಿತದ ನಡುವೆ, ಬಂದೂಕುಗಳ ನಿರಂತರ ಸಿಡಿತದ ನಡುವೆ, ಹಾರುವ ಕ್ಷಿಪಣಿಗಳ ಕೆಳಗೆ. ಇದೇ ಸದ್ದು ನೀರವ ರಾತ್ರಿಗಳಲ್ಲಿ ಕೂಗುವ ಹಕ್ಕಿಗಳ ಸದ್ದಾಗಿ ಬಿಡುತ್ತದೆ, ಅಳುವ ಮಕ್ಕಳ ಕೂಗಾಗುತ್ತದೆ ಇದೇ ನೀರವ ಮೌನವಾಗಿ ಬಿಡುವುದು ಇಲ್ಲಿನ ಅಸಂಗತ. ನನ್ನ ಗೆಳತಿ ಹೇಳುವ ಹಾಗೆ 'ಯುದ್ಧ ಎನ್ನುವುದು ಕೇವಲ ಸದ್ದಲ್ಲ. ಅದು ಮೌನ. ಮನುಷ್ಯತ್ವದ ಮೌನ'.

ಇರಾಕನ್ನು ಬಿಟ್ಟ ನಂತರ **Women for Women International** ಅನ್ನುವ ಸಂಸ್ಥೆಯನ್ನು ಕಟ್ಟಿದೆ. ನಮ್ಮ ಸಂಸ್ಥೆ ಯುದ್ಧದಲ್ಲಿ ಬದುಕುಳಿದ ಮಹಿಳೆಯರಿಗಾಗಿ ಕೆಲಸ ಮಾಡುತ್ತದೆ. ಕಾಂಗೋದಿಂದ ಆಫ್ಘಾನಿಸ್ತಾನದವರೆಗೆ, ಸುಡಾನ್ ಇಂದ ರವಂಡವರೆಗೆ ಓಡಾಡಿದೆ. ಆಗ ನಂಗೆ ಅರ್ಥವಾದದ್ದು ಯುದ್ಧದ ಬಣ್ಣ, ಸದ್ದು ಮಾತ್ರವಲ್ಲ ಭಯಗಳು ಕೂಡ ಒಂದೇ ರೀತಿ ಇರುತ್ತೆ